ಶಾಲೆಗೆ ಹೋಗದಿದ್ದುದರಿಂದಾಗಿಯೇ ಸಾಧನೆ ಮಾಡಿದ್ದಲ್ಲ; ಬೇರೆ ಕ್ಷೇತ್ರವನ್ನು ಆರಿಸಿಕೊಂಡು ಅಲ್ಲಿ ನಡೆಸಿದ ಪರಿಶ್ರಮದಿಂದಾಗಿ ಸಾಧನೆಯನ್ನು ಮಾಡಿದ್ದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಒಳ್ಳೆಯ ಅಂಕಗಳನ್ನು ಪಡೆಯುವುದು ಸಣ್ಣ ವಿಷಯವಲ್ಲ. ವಿದ್ಯಾರ್ಥಿಗಳು ಅದಕ್ಕಾಗಿ ಬಹಳ ಶ್ರಮಪಟ್ಟಿರುತ್ತಾರೆ. ಅದಕ್ಕೆ ಅದರದೇ ಆದ ಶೈಕ್ಷಣಿಕ ಮಹತ್ವ ಇರುತ್ತದೆ. ಔಪಚಾರಿಕ ಶಿಕ್ಷಣದಲ್ಲಿ ಮೌಲ್ಯಮಾಪನವಿಲ್ಲದ ಕಲಿಕೆಯೇ ಇಲ್ಲ. ಆದ್ದರಿಂದ ಮೌಲ್ಯಮಾಪನದ ಒಂದು ರೂಪವಾದ ಪರೀಕ್ಷೆಗೂ ಮಹತ್ವ ಇದೆ.

## ಸರಿಯಾದ ಪರಿಕಲ್ಪನೆ

ವಿದ್ಯಾರ್ಥಿಗಳು ರೂಪಿಸಿಕೊಳ್ಳಬೇಕಾದ ಸರಿಯಾದ ಪರಿಕಲ್ಪನೆ ಏನೆಂದರೆ, ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕವನ್ನೇ ತಾನು ಪಡೆಯಬೇಕು. ಆದರೆ ಆ ಅಂಕವು ಪರೀಕ್ಷೆಗಾಗಿ ನಡೆಸಿದ ಪ್ರಶ್ನೋತ್ತರಗಳ ತಾಲೀಮಿನಿಂದ ಬರಬೇಕಾದ್ದಲ್ಲ; ಕಲಿಕೆಯನ್ನು ನಡೆಸಿದ್ದರ ಪರಿಣಾಮವಾಗಿಯೇ ಆ ಅತ್ಯುತ್ತಮ ಅಂಕಗಳು ಬರಬೇಕು ಎನ್ನುವುದು. ಈ ಕಲ್ಪನೆಗೆ ಬದ್ಧರಾದ ವಿದ್ಯಾರ್ಥಿಗಳಿಗೆ ಜನವರಿವರೆಗಿನ ದಿನಗಳು ನಿರಾಳತೆಯ ದಿನಗಳೆಂದೂ, ನಂತರದ ದಿನಗಳು ಪರೀಕ್ಷಾ ಹಿಂಸೆಯ ದಿನಗಳೆಂದೂ ಅನಿಸುವುದಿಲ್ಲ. ಪ್ರತಿಯೊಂದು ದಿನವೂ ಕಲಿಕಾ ದಿನವಾಗಿರುತ್ತದೆ. ಆಗ ಅರ್ಥಪೂರ್ಣ ಕಲಿಕೆ ನಡೆಯುತ್ತದೆ. ಪರೀಕ್ಷೆಯು ಯಾವುದೇ ಒತ್ತಡವಿಲ್ಲದ ಸಹಜ ಪ್ರಕ್ರಿಯೆಯಾಗಿ ಕಾಣಿಸುತ್ತದೆ. ಆಗ ಶಾಲಾ ಕಲಿಕೆಯೂ ಜೀವನವೂ ಬೇರೆಬೇರೆಯಾಗುವುದಿಲ್ಲ. ಈ ಲೇಖನದ ಪ್ರಾರಂಭದಲ್ಲಿ ಹೇಳಿದ ತಿರುಮಲನಿಗೆ ಬಂದಂತಹ ಸಮಸ್ಯೆಗಳು ಬರುವುದಿಲ್ಲ.

## ಕಲಿಕೆಯನ್ನು ಹೇಗೆ ನಡೆಸಬೇಕು?

ಪರೀಕ್ಷೆಯಲ್ಲಿ ಹಿನ್ನಡೆ ಅನುಭವಿಸುವ ನಮ್ಮ ಬಹಳಷ್ಟು ವಿದ್ಯಾರ್ಥಿಗಳು ವಿಷಯ ಗೊತ್ತಿಲ್ಲದೆ ಹಿನ್ನಡೆಯುವುದಲ್ಲ. ಬದಲು ಗೊತ್ತಿರುವ ವಿಚಾರವನ್ನು ಭಾಷೆಯ ಮೂಲಕ ಬರವಣಿಗೆಯಲ್ಲಿ ಅಭಿವ್ಯಕ್ತಪಡಿಸಲು ಸಾಧ್ಯವಾಗದೆ ಹಿನ್ನಡೆಯುತ್ತಾರೆ. ಆದ್ದರಿಂದ ಸಾರ್ವಜನಿಕ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಬರವಣಿಗೆಯ ಭಾಷಾ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಮೊದಲ ಆದ್ಯತೆಯನ್ನು ಕೊಡಬೇಕು.

ಭಾಷೆ ಯಾವ ರೀತಿ ಸಮಸ್ಯೆಯಾಗುತ್ತದೆ ಎನ್ನುವುದು ವಿದ್ಯಾರ್ಥಿಗಳಿಗೆ ಗೊತ್ತಿರಬೇಕು. ಇಂಗ್ಲಿಷ್ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡ ಬಹುತೇಕ ವಿದ್ಯಾರ್ಥಿಗಳಿಗೆ ಮನೆಮಾತು ಇಂಗ್ಲಿಷ್ ಅಲ್ಲ. ಶಾಲಾ ಕಾಲೇಜಿನಲ್ಲೂ ಬಹುತೇಕ ಪಾಠ–ಬೋಧನೆ ಮಾತ್ರ ಇಂಗ್ಲಿಷ್‌ನಲ್ಲಿ ನಡೆಯುವುದು. ಆಗ ಸ್ವತಂತ್ರವಾಗಿ ವಿಚಾರವನ್ನು ಇಂಗ್ಲಿಷ್‌ನಲ್ಲಿ ಮಂಡಿಸುವ ಕೌಶಲ ಕಡಿಮೆಯಾಗುತ್ತದೆ. ಪಠ್ಯದಲ್ಲಿ ಓದಿದ ಕೆಲವು ವಾಕ್ಯಗಳು ಮರೆತುಹೋದರೆ ವಿಚಾರ ಗೊತ್ತಿದ್ದರೂ ಸ್ವತಂತ್ರ ವಾಕ್ಯ ರಚಿಸಿ ಬರೆಯಲು ಆಗುವುದಿಲ್ಲ. ಕನ್ನಡ ಮಾಧ್ಯಮವನ್ನು ಆರಿಸಿಕೊಂಡವರಿಗೆ ವಿಚಾರವನ್ನು ಸ್ವಂತ ವಾಕ್ಯದಲ್ಲಿ ಬರೆಯುವ ಸಾಮರ್ಥ್ಯ ಸ್ವಲ್ಪ ಜಾಸ್ತಿ ಇರುತ್ತದೆ. ಆದರೆ ಪರೀಕ್ಷೆಗಳಲ್ಲಿ ಬಹು ಆಯ್ಕೆ ಪ್ರಶ್ನೆಗಳಿಗೆ ಮಹತ್ವ ಬಂದ ಮೇಲೆ, ಭಾಷಾ ಕಲಿಕೆಯು ಅನೇಕ ಗೊಂದಲಗಳಿಗೊಳಗಾದ ಮೇಲೆ ಗ್ರಾಂಥಿಕ ರೂಪದ ಕನ್ನಡ ಕಲಿಸುವಿಕೆಯೂ ದುರ್ಬಲವಾಗಿದೆ. ಆಡುಮಾತು ಕನ್ನಡ ಗೊತ್ತಿದ್ದರೂ ಪರೀಕ್ಷೆಯಲ್ಲಿ ಬರೆಯಲು ಸಮಸ್ಯೆಯಾಗುತ್ತದೆ. ಆದ್ದರಿಂದ ಬರವಣಿಗೆಯ ಭಾಷಾ ಸಾಮರ್ಥ್ಯದ ಹೆಚ್ಚಳ ವಿದ್ಯಾರ್ಥಿಗಳಿಗೆ ಆದ್ಯತೆಯಾಗಬೇಕು.

ಮಾತನಾಡುವಾಗ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸುವುದು ಪರೀಕ್ಷೆಯ ದೃಷ್ಟಿಯಿಂದ ಮುಖ್ಯವಲ್ಲದೆ ಇದ್ದರೂ ಕಲಿಕೆಯ ದೃಷ್ಟಿಯಿಂದ ಮುಖ್ಯವಾಗಿದೆ. ಒಬ್ಬರು ನ್ಯಾಯಾಧೀಶರು ಕೊಟ್ಟ ತೀರ್ಪು, 'Hang him, not leave him' ಎಂದುದರಲ್ಲಿ ಅಲ್ಪಪ್ರಮಾಣದ ಸ್ಥಳವನ್ನು ಬದಲಾಯಿಸಿ, 'Hang him not, leave him' ಎಂದು ಟೈಪ್ ಮಾಡಿದಾಗ ಅದರ ಓದುವಿಕೆ ತೀರ್ಪನ್ನೇ ಹೇಗೆ ಬದಲಾಯಿಸುತ್ತದೆ ಎಂಬ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಂಡು ಭಾಷೆಯನ್ನು ಮಾತನಾಡುವಾಗಲೂ ಬಳಸುವುದನ್ನು ಕಲಿಯಬೇಕು.

## ಆಲಿಸುವಿಕೆ

ಇತ್ತೀಚಿನ ದಿನಗಳಲ್ಲಿ ತರಗತಿಯಲ್ಲಿ ವಿದ್ಯಾರ್ಥಿಗಳ ಆಲಿಸುವ ಪ್ರವೃತ್ತಿ ಕಡಿಮೆಯಾಗಿದೆ. ಆಕರ್ಷಕವಾಗಿ ಪಾಠ ನಿರ್ವಹಣೆ ಮಾಡಲು ಅಧ್ಯಾಪಕರಿಗೆ ಸಾಧ್ಯವಾಗದೆ ಇದ್ದಾಗಲೂ ಹೀಗಾಗುತ್ತದೆ. ವಿಚಾರವನ್ನು 20 ನಿಮಿಷಕ್ಕಿಂತ ಜಾಸ್ತಿ ನಿರಂತರವಾಗಿ ಕೇಳಿಸಿಕೊಳ್ಳಲು ಆಗುವುದಿಲ್ಲ; ಆದ್ದರಿಂದ 20 ನಿಮಿಷಕ್ಕೊಮ್ಮೆ ನಿರಾಳತೆಯ ಅಂಶವನ್ನು ತರಬೇಕೆಂಬ ಅರಿವು ಅಧ್ಯಾಪಕರಲ್ಲಿ ಇಲ್ಲದಾಗಲೂ ಹೀಗಾಗುತ್ತದೆ. ವಿದ್ಯಾರ್ಥಿಗಳು ಯಾವುದೋ ಗುಂಗಿಗೆ ಒಳಗಾಗಿಯೇ ಇದ್ದಾಗ ಮತ್ತು ವಿದ್ಯಾರ್ಥಿಗಳಿಗೆ ಬಾಹ್ಯ ಆಕರ್ಷಣೆಗಳು ಜಾಸ್ತಿಯಾದಾಗಲೂ ಹೀಗಾಗುತ್ತದೆ.

ಆದರೆ ಆಲಿಸುವಿಕೆ ಕಲಿಕೆಯ ಅತೀ ಪ್ರಧಾನ

SSLC-PUC ವಿದ್ಯಾರ್ಥಿಗಳಿಗೆ ಪ್ಲಾನರ್

### ಟಿಪ್ಪಣಿ ಮಾಡುವುದು ಹೇಗೆ?

ಅಧ್ಯಯನಕ್ಕೆ ನಾಲ್ಕು ಪುಟಗಳನ್ನು ಆರಿಸಿಕೊಂಡಿದ್ದರೆ ಎರಡು ಪುಟವನ್ನು ಓದಿ. ಹತ್ತು ನಿಮಿಷದ ನಂತರ ಓದಿದ್ದನ್ನು ನೆನಪು ಮಾಡಿಕೊಳ್ಳಿ. ನೆನಪಾಗದಿರುವುದನ್ನು ಮತ್ತೊಮ್ಮೆ ಓದಿ. ನಂತರ ಓದಿದ ವಿಷಯಗಳ ಅತೀ ಮುಖ್ಯ ಸಂಗತಿಗಳನ್ನು ನಾಲ್ಕೈದು ವಾಕ್ಯದಲ್ಲಿ ಪಾಯಿಂಟ್ಸ್ ಆಗಿ ಬರೆದಿಡಿ.

